| | |
|---|---|
| 19 | ಮೇಲ್ಕಂಡ ಎರಡು ಹಂತದಲ್ಲಿ ನಿವೇಶನಗಳನ್ನು ಬಿಡುಗಡೆಗೊಳಿಸಿದ ನಂತರ ಅಂತಿಮವಾಗಿ ಉಳಿಯುವ ಶೇಕಡಾ 30 ರಷ್ಟು ನಿವೇಶನಗಳನ್ನು ವಿನ್ಯಾಸದಲ್ಲಿ ಅಗತ್ಯ ಮೂಲ ಸೌಕರ್ಯಗಳಾದ ರಸ್ತೆ ಡಾಂಬರೀಕರಣ ನೀರು ಸರಬರಾಜು, ವಿದ್ಯುತ್ ಶಕ್ತಿ ಸಂಪರ್ಕ ಮಳೆ ನೀರು ಸಂಗ್ರಹಣೆ, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಒಳಚರಂಡಿ ವ್ಯವಸ್ಥೆ ಹಾಗೂ ಪಾರ್ಕ್ ಮತ್ತು ನಾಗರೀಕ ಸೌಲಭ್ಯದ ಪ್ರದೇಶಗಳಿಗೆ fencing ಅಳವಡಿಸಿ ಹಾಗೂ ರಸ್ತೆಗಳ ಅಕ್ಕಪಕ್ಕದಲ್ಲಿ ಗಿಡ-ಮರಗಳನ್ನು ಸೇರಿದಂತೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ನೀಡಿದ ನಂತರವೇ ನಿವೇಶನಗಳನ್ನು ಬಿಡುಗಡೆ ಮಾಡಲಾಗುವುದು. |
| 20 | ಪ್ರಾಧಿಕಾರವು ಅನುಮೋದಿಸಿದ ವಿನ್ಯಾಸ ನಕ್ಷೆಯಂತೆ ಭೂ-ಮಾಲೀಕರು/ಅರ್ಜಿದಾರರು/ಅಭಿವೃದ್ಧಿದಾರರು ವಿನ್ಯಾಸದಲ್ಲಿರುವಂತ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ ಜಾಗಗಳು. ನಿವೇಶನ ಬರುವ ಜಾಗಗಳನ್ನು ಭೂಮಿಯ ಮೇಲೆ ಅಳವಡಿಸಿ ವಿನ್ಯಾಸ ನಕ್ಷೆಯನ್ನು ನಾಮಫಲಕದಲ್ಲಿ ಪ್ರಕಟಿಸಿ, ರಸ್ತೆ, ಉದ್ಯಾನವನ,ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿರಿಸಲಾಗಿರುವ ಜಾಗಗಳನ್ನು ಯಾವುದೇ ಫಲಾಪೇಕ್ಷೆಯಿಲ್ಲದೇ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವುದರಿಂದ ವಿನ್ಯಾಸದಲ್ಲಿನ ಬೇರೆ ಬೇರೆ ಭಾಗಗಳಲ್ಲಿ ಮೂಲನಿವೇಶನಗಳನ್ನೊಳಗೊಂಡಂತೆ ಶೇ.40 ರಷ್ಟು ನಿವೇಶನಗಳನ್ನು ನಮೂನೆ-1 ರಂತೆ ಬಿಡುಗಡೆ ಮಾಡಲಾಗಿದೆ. |
| 21 | ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ವಿಧಿ 17 (4) ರಂತೆ ಕ್ರಮ ಜರುಗಿಸಲಾಗುವುದು. |

Member Secretary
ನೆಲಮಂಗಲ ಯೋಜನಾ ಪ್ರಾಧಿಕಾರ

ಪ್ರತಿಯನ್ನು:

1. ಅರ್ಜಿದಾರರಾದ ಶ್ರೀ ಆರ್.ಎಸ್.ಮೂರ್ತಿ. ನಂ.482, 3ನೇ ಮಹಡಿ, 80 ಅಡಿ ರಸ್ತೆ, ಹೆಚ್.ಎಂ.ಟಿ.ಲೇಔಟ್, ಆರ್.ಟಿ.ನಗರ, ಬೆಂಗಳೂರು. ಇವರ ಮಾಹಿತಿಗಾಗಿ ವಿನ್ಯಾಸದ ನಕ್ಷೆಯೊಂದಿಗೆ ಕಳುಹಿಸಲಾಗಿದೆ.

2. ಪಂಚಾಯಿತ್ ಅಭಿವೃದ್ಧಿ ಅಧಿಕಾರಿ, ಸೋಲದೇವನಹಳ್ಳಿ ಗ್ರಾಮ ಪಂಚಾಯಿತಿ, ಸೋಲದೇವನಹಳ್ಳಿ, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಇವರಿಗೆ ವಿನ್ಯಾಸದ ಪ್ರತಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

3. ಉಪನೋಂದಣಾಧಿಕಾರಿಗಳು, ಕಸಬಾ ಹೋಬಳಿ, ನೆಲಮಂಗಲ ತಾಲ್ಲೂಕು, ಇವರಿಗೆ ಮುಂದಿನ ಕ್ರಮಕ್ಕಾಗಿ ನಕ್ಷೆಯೊಂದಿಗೆ ಕಳುಹಿಸಿದೆ.

4. ಕಛೇರಿ ಪ್ರತಿ.